ಮೇಲೆ ಕೂತು ನಡುವಿನ ಸ್ಟೂಲ್ ಮೇಲೆ ಚಿಮಣಿ ದೀಪ ಇಟ್ಟು ಅನಂತ ಮತ್ತು ದತ್ತು ಓದುತ್ತಿದ್ದರು; ಅಡಿಗೆ ಒಳದಲ್ಲಿ ಸಲೀಲತ್ತೆ, ಅಕ್ಕು ಮತ್ತು ಅಪ್ಪಿಯಕ್ಕನ ಸುದ್ದಿ ಸಾಮ್ರಾಜ್ಯ. ದತ್ತುವಿನ ಲಕ್ಷ್ಯ ಅತ್ತವೇ ಇರುತ್ತಿತ್ತು; ಒಮ್ಮೊಮ್ಮೆ ಸದ್ದು ಮಾಡದೆ ಕಳ್ಳ ಹೆಜ್ಜೆ ಹಾಕುತ್ತ ಹಿಂಬದಿಯಿಂದ ಬಂದು ಪುಸಕ್ಕನೆ ದೀಪ ಆರಿಸಿ ಬಿಡುತ್ತಿದ್ದಳು ಮತ್ತು ಚಿಮಣಿ ಹಚ್ಚಲು ಎದ್ದು ಬರುತ್ತಿದ್ದ ಅನಂತನನ್ನು ಬಾಗಿಲಿಗೆ ಅಡ್ಡ ನಿಂತು ಕೊಸರಾಡಿ ಹೋಗುವಂತೆ ಕೀಟಲೆ ಮಾಡುತ್ತಿದ್ದಳು. ಅಕ್ಕು ಶೀ...ಶೀ... ಎಂದು ನಾಚುತ್ತಿದ್ದಳು; ಅಪ್ಪಿಯಕ್ಕನದು ಕಟು ಪ್ರೀತಿಯ ಜೀವ; ರುಚಿ, ವಡವೆ, ವಸ್ತ್ರಗಳ ಕಡು ವ್ಯಾಮೋಹಿ; ನಡೆಯುವಾಗ ಚಂಡಿನಂತೆ ಪುಟಿಯುತ್ತಿದ್ದಳು. ಅವಳಿದ್ದಷ್ಟು ಹೊತ್ತು ಮನೆಯಲ್ಲಿ ಸಿರಿ ಒಲಿದಂತೆ ಎಂದು ಅನಂತನಿಗೆ ಅನಿಸುವುದು.

ಅಕ್ಕು ಸ್ವಭಾವವೇ ಬೇರೆ ಥರ; ದಿನಾಲು ದೇವರ ಪೂಜೆಗೆ ಹೂ ಕೊಯ್ಯುವಳು; ಬೆಳಗ್ಗೆ ಎದ್ದವಳೆ ಜಗಲಿಯ ಎಲ್ಲ ದೇವರ ಪಟಗಳಿಗೆ ಕೈ ಮುಗಿವಳು; ರಂಗೋಲಿ ಹಾಕಲು ಮರೆಯಳು; ಸಂಜೆ ನಂದಾದೀಪದ ಮಂದ ಬೆಳಕಲ್ಲಿ ಭಜನೆ ಮಾಡುವಳು; ಯಾರಾದರೂ ಮನೆಯವರು ಬಾಗಿಲ ತಿರುವಿನಲ್ಲಿ ಆಕಸ್ಮಿಕ ಎದುರಾದಾಗ, ಕೈತಪ್ಪಿ ಪಾತ್ರೆ ಬಿದ್ದಾಗ ಎದೆ ಧಸಕ್ಕಾಗಿ ಬೆಚ್ಚಿ ನಿಂತು, "ಅಯ್ಯೊ ಹೆದ್ರಿಹೋದೆ" ಎಂದು ಸದಾ ಭಯದಲ್ಲಿರುವಳು; ಹಬ್ಬದಲ್ಲಿ ಪೂಜೆಯ ತಯಾರಿ ಅವಳದ್ದೆ; ವಿಷ್ಣು ಸಹಸ್ರನಾಮ ಕಂಠಪಾಠವಾಗಿದೆ; ಅವಳ ಆಯಿಯಂತೆ ಅನ್ನದ ಚರಿಗೆಗೆ ಸೋಕುವ ಕೈಯನ್ನು ಮುಸುರೆ ಮೈಲಿಗೆ ಎಂದು ನೀರು ಹಚ್ಚುವಳು; ಒಬ್ಬಳೇ ದೇವಸ್ಥಾನಕ್ಕೆ ಹೋಗಿ ಗಂಟೆ ತೂಗಿ, ಪ್ರದಕ್ಷಣೆ ಹಾಕಿ, ಚಂದ್ರಶಾಲೆಯಲ್ಲಿ ಕೂತು ಬರುವಳು. ಹೆಗಡೆಯ ಪಬ್ಲಿಕ್ ಲೈಬ್ರರಿಯಿಂದ ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯನ್ನು ತಂದು ಮಧ್ಯಾಹ್ನ ಎಲ್ಲರೂ ಮಲಗಿದಾಗ ಓದುವಳು; ಬ್ಲೊವೌಜ್ ಬಟ್ಟೆಯನ್ನು ಶಕು ಟೇಲರಿಗೆ ಹೊಲಿಯಲು ಕೊಡುವಾಗ, "ನನಗೆ ಡೀಪ ನೆಕ್ ಬ್ಯಾಡ" ಎನ್ನಲು ಮರೆಯಳು; "ಅಕ್ಕ–ತಂಗಿಗೆ ಎಷ್ಟು ಫರಕ್ಕು!" ಶಕು ನಗುವಳು; ದಣಪೆಗೆ ಬರುವ ಹಸುವಿನ ನೊಸಲು ಮುಟ್ಟಿ ಕಣ್ಮುಚ್ಚಿ ನಮಿಸುವಳು; 'ಅವರದ್ದು ಲವ್ ಮ್ಯಾರೇಜ್‌ಂತೆ', 'ಅವಳ ಇಟ್ಕಂಡಿದ್ದಾನಂತೆ' ಇತ್ಯಾದಿ ಅಪ್ಪಿಯಕ್ಕ ಅಂತೆಕಂತೆಯ ಪುರಾಣ ಬಿಚ್ಚಿದಾಗ ಅಕ್ಕು, 'ಹೆಣ್ಣಿಗೆ ಮಾನ ದೊಡ್ಡು, ತಾಯಿ ಮನೆ ಮರ್ಯಾದೆ ಕಳಿ ಬಾರ್ದು' ಎಂದು ಧಡಕ್ಕನೆ ಎದ್ದು ಹೋಗುವಳು; ಅಪ್ಪಿಯಕ್ಕ ತಾನು ಸೋಶಿಯಲ್ ಎನ್ನುತ್ತ ದೇವಸ್ಥಾನದಲ್ಲಿ, ಪುಂಡಲೀಕನ ಅಂಗಡಿಯಲ್ಲಿ ವಾಲಿಬಾಲ್ ಆಡುವ ಸಾಂಡೂ ಬನಿಯನ್ ಹುಡುಗರ ಜೊತೆ ವಯ್ಯಾರ ಮಾಡುವುದನ್ನು ಅಕ್ಕು ಆಕ್ಷೇಪಿಸಿದ್ದಳು; ಪ್ರತಿ ಸಲವೂ ರಾಯ್ಕರ ಗಣಪತಿ ಮತ್ತು ಅಪ್ಪಿಯ ನಡುವಿನ ಚಕ್ಕಂದ ಸರಸದ ನೋಟಗಳ ವಿನಿಮಯ ಅಂಕೆ ತಪ್ಪಿ ದೀರ್ಘವಾಗುವುದನ್ನು ಅಕ್ಕು ಗಮನಿಸಿರುತ್ತಿದ್ದಳು; "ಅವರೆಲ್ಲ ನನ್ನ ಕ್ಲಾಸ್‌ಮೇಟ್ಸು. ನೀ ದೋ... ಡ್..." ಅಪ್ಪಿಯಕ್ಕ ಮಾತನ್ನು ಅರ್ಧ ಕತ್ತರಿಸುವಳು; "ಆಯಿ, ಅಪಿಯಕ್ಕ ಕಂಡಕಂಡವರ ಮುಂದೆ ಹಲ್ಕಿರಿಯೂದು ಸಮಾ ಕಾಣ್ತನೆ" ಎನ್ನುವಳು; ಆಗಾಗ ಸಲೀಲತ್ತೆ ಮತ್ತು ಅಪ್ಪಿಯಕ್ಕನ ನಡುವೆ ವಾಗ್ಯುದ್ಧವಾಗಿ ಅಪ್ಪಿಯಕ್ಕ ಊಟ ಮಾಡದೆ ಮಲಗಿಬಿಡುತ್ತಿದ್ದಳು; ಸಲಿಗೆಯಿಲ್ಲದ ಅಕ್ಕು ನಡತೆ ಅನಂತನಿಗೆ ಬಿಗಿ ಎನಿಸಿತ್ತು. ಇಬ್ಬರು ಅಕ್ಕಂದಿರ ನಡುವೆ ದತ್ತು ಕೊಟ್ಟಿಗೆಯ ಇಕ್ಕಟ್ಟಾದ ದಣಕಲ ಮಧ್ಯೆ ಸಿಕ್ಕಿ ಒದ್ದಾಡುತ್ತಿರುವ ಕರುವಿನಂತೆ ಕಾಣುತ್ತಿದ್ದ.

ಮಾಸ್ತರು ಸೋತಿದ್ದರು; ಅಕ್ಕು ಮೊದಲ ವರ್ಷಕ್ಕೆ ಕಾಲೇಜಿಗೆ ಹೋಗುವುದ ನಿಲ್ಲಿಸಿದಳು. ಅಪ್ಪಿಯ ಮದುವೆ ಸಸಾರದಲ್ಲಿ ಆಯಿತು; ಹುಡುಗ ಹತ್ತಿರದ ಮಿರ್ಜಾನದವನು; ದೀವಗಿ ದೇವಸ್ಥಾನದಲ್ಲಿ ರಸೀದಿ ಕಚೇರಿಯಲ್ಲಿ ಕಾರಕೂನಿಕೆ ಚಾಕರಿಯಂತೆ. ಮನೆಯಲ್ಲಿ ಗೇರು ಬೇಣ, ಹತ್ತು ಗುಂಟೆ ಗದ್ದೆ ಮತ್ತು ತೆಂಗಿನ ಹಿತ್ತಲಿದೆ. ದಂಪತಿಗೆ ಸಾಕು ಬಿಡಿ, ಆದರೆ ಲಕ್ಷಣವಾಗಿರುವ ಅಪ್ಪಿ ನರಪೇತಲ ಕಾಮೇಶ್ವರನನ್ನು ಒಪ್ಪಿದ್ದು ಪವಾಡವೇ ಎಂಬುದು ಜನರ ಅಚ್ಚರಿಯ ಉದ್ಗಾರ. ಈ ಅಚ್ಚರಿಯೊಂದಿಗೆ